ಅಸಲು ದಾವಾ ನಂ. 115/2017
ಡಿ ಡಬ್ಲು -6

ದಿನಾಂಕಃ 18-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಮುಖ್ಯ ವಿಚಾರಣೆಃ- ಪ್ರತಿವಾದಿ ಪರ ಶ್ರೀ . ಎಫ್ ಎನ್ ಎನ್ ವಕೀಲರಿಂದ .</u>

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

**<u>ಪಾಟೀಸವಾಲುಃ- ವಾದಿ ಪರ ಶ್ರೀ.ವಿ ಬಿ ಟಿ ವಕೀಲರಿಂದ.</u>**

ನಾನು ಶಾಲೆ ಕಲಿತಿರುವುದಿಲ್ಲ. ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳ ಮಾಹಿತಿ ಇರುತ್ತದೆ. ಸಾಕ್ಷ್ಯ ಪ್ರಮಾಣ ಪತ್ರಕ್ಕೆ ಮಾಹಿತಿ ನಾನೇ ನೀಡಿರುತ್ತೇನೆ. ಸಾಕ್ಷ್ಯ ಪ್ರಮಾಣ ಪತ್ರಕ್ಕೆ ಸಹಿ ಮಾಡಿದ್ದನ್ನು ಹೊರತುಪಡಿಸಿ ನನಗೆ ಬೇರೆ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷ್ಯ ಪ್ರಮಾಣ ಪತ್ರದ ಸಂಗತಿಗಳನ್ನು ಓದಿ ಹೇಳಿದ ನಂತರ ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದ ಸಂಗತಿಗಳು ಸರಿಯಾಗಿರುತ್ತವೆ. ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಕಂಡಿಕೆ 4 ರಲ್ಲಿ ನಾನು ಅನೇಕ ............................ ಖೊಟ್ಟಿಯಾಗಿ ಮಾಡಿಕೊಂಡಿದ್ದು ಇರುತ್ತದೆ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ವಾದಿ 1 ನೇ ಪ್ರತಿವಾದಿಯ ಮಧ್ಯೆ ದಾವಾ ಆಸ್ತಿಯ ಸಂಬಂಧ ಯಾವ ದಿನಾಂಕದಂದು ಏನು ಕರಾರು ಆಗಿರುತ್ತದೆ ಎಂದು ಗೊತ್ತಿಲ್ಲ. ವಾದಿ 1 ನೇ ಪ್ರತಿವಾದಿಗೆ ಯಾವ ದಿನಾಂಕದಂದು ಸರಾಯಿ ಕುಡಿಸಿ ಮೋಸ ಮಾಡಿರುತ್ತಾನೆ ಎಂದು ಗೊತ್ತಿಲ್ಲ. ದಿನಾಂಕ 16-07-2014 ರಂದು ಹಾಗೂ 17-06-2015 ರಂದು ನಾನು ಸವಣೂರಿಗೆ ಬಂದಿಲ್ಲ. ಆದ್ದರಿಂದ ದಾವಾ ಆಸ್ತಿಯ ಸಂಬಂಧ ವಾದಿ 1 ನೇ ಪ್ರತಿವಾದಿಯೊಂದಿಗೆ ಏನು ವ್ಯವಹಾರ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಈ ದಿವಸ ನಾನು 1 ನೇ ಪ್ರತಿವಾದಿಯೊಂದಿಗೆ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿ ಕಳೆದ 10 ವರ್ಷಗಳಿಂದ ಕೂಡಿಯೇ ವಾಸ ಹೊಂದಿರುತ್ತಾರೆ. ವಾದಿ 1 ನೇ ಪ್ರತಿವಾದಿಯ ವಿರುದ್ಧ ಏನು ಪರಿಹಾರ ಬೇಡಿ ದಾವೆ ಸಲ್ಲಿಸಿರುತ್ತಾರೆ ಎಂದು ಗೊತ್ತಿಲ್ಲ. ನನಗೆ 1 ನೇ ಪ್ರತಿವಾದಿಯ ಹೆಂಡತಿ ಸಾಕ್ಷ್ಯ ನುಡಿಯಲು ಕಳುಹಿಸಿರುತ್ತಾರೆ. ವಾದಿ ಮತ್ತು 1 ನೇ ಪ್ರತಿವಾದಿಯ

ಮಧ್ಯೆ ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು, 1 ನೇ ಪ್ರತಿವಾದಿ ಮತ್ತು ಪಾರವ್ವ ಒಂದೇ ಊರಿನವರು ಎಂದರೆ ಸರಿ. 1 ನೇ ಪ್ರತಿವಾದಿಗೆ ಕುಡಿತದ ಚಟ ಇರಲಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯ ಹೆಂಡತಿಯ ಮಾತು ಕೇಳಿ ಅವರಿಗೆ ಕುಡಿತದ ಚಟ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).